ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST | ಇದು ಸುದ್ದಿ ವಿಳಾಸ | ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | f / ಕನ್ನಡ post | Price: ₹1

Vol.No.02 | Issue. 118 | Pages. 2 | Date: 11-04-2026, SATURDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 118 - ಪುಟಗಳು : 2 | 11-04-2026 | ಶನಿವಾರ | Ph: 8762954248 | ದರ : ₹1

ಕಾನೂನು ಚೌಕಟ್ಟಿನಲ್ಲಿ ಸಮಸ್ಯೆ ಪರಿಹಾರಕ್ಕೆ ಸೂಚನೆ

ಬೇಲೂರಿನಲ್ಲಿ ಜನ ಸ್ಪಂದನ ಸಭೆ | 745 ಅರ್ಜಿ ಸಲ್ಲಿಕೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಸಾರ್ವಜನಿಕರ ಸಮಸ್ಯೆಗಳನ್ನು ಕಾನೂನು ಚೌಕಟ್ಟಿನಲ್ಲಿ ಬಗೆಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡುವಂತೆ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಭೈರೇಗೌಡ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬೇಲೂರು ತಾಲ್ಲೂಕು ಕಚೇರಿ ಆವರಣದಲ್ಲಿ ಶುಕ್ರವಾರ ಏರ್ಪಡಿಸಿದ್ದ ಜನಸ್ಪಂದನ ಕಾರ್ಯಕ್ರಮದಲ್ಲಿ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿ ಮಾತನಾಡಿದ ಅವರು, ಕಾಟಾಚಾರಕ್ಕೆ ಅರ್ಜಿ ವಿಲೇವಾರಿ ಮಾಡದೆ ನೈಜತೆಯನ್ನು ಅರಿತು ಪರಿಶೀಲನೆ ನಡೆಸಿ ವಿಲೇವಾರಿಗೆ ಕ್ರಮ ಕೈಗೊಳ್ಳಬೇಕು. ಜಿಲ್ಲಾ ಮಟ್ಟದ ಜನ ಸ್ಪಂದನ ಕಾರ್ಯಕ್ರಮವನ್ನು ತಾಲ್ಲೂಕು ಮಟ್ಟದಲ್ಲಿ ಆಯೋಜಿಸುವ ಮೂಲಕ ಜನರ ಸಮಸ್ಯೆಗಳನ್ನು ಆಲಿಸಿ ಪರಿಹಾರ ಕಂಡುಕೊಳ್ಳಲು ಸಾಧ್ಯವಾಗುತ್ತದೆ ಎಂದರಲ್ಲದೆ, ಆಡಳಿತದ ವ್ಯವಸ್ಥೆಯನ್ನು ಬಲಪಡಿಸಲು ಸಹಕಾರಿಯಾಗುತ್ತದೆ ಎಂದರು.

56 ಅರ್ಜಿ ವಿಲೇವಾರಿಗೆ ಬಾಕಿ

ಇಂತಹ ವೇದಿಕೆಗಳ ಮೂಲಕ ಜನರ ಸಮಸ್ಯೆಗಳನ್ನು ನೇರವಾಗಿ ಆಲಿಸುವುದರಿಂದ ಮಧ್ಯವರ್ತಿಗಳ ಹಾವಳಿ ಕೂಡ ತಡೆಗಟ್ಟಬಹುದಾಗಿದೆ. ಈ ಹಿಂದೆ ಹಾಸನದಲ್ಲಿ ನಡೆದ ಜನ ಸ್ಪಂದನ ಕಾರ್ಯಕ್ರಮದಲ್ಲಿ 860, ಚನ್ನರಾಯಪಟ್ಟಣದಲ್ಲಿ 1069, ಸಕಲೇಶಪುರದಲ್ಲಿ 964 ಅರ್ಜಿಗಳು ಸೇರಿದಂತೆ ಒಟ್ಟು 2893 ಅರ್ಜಿಗಳಲ್ಲಿ 56 ಮಾತ್ರ ವಿಲೇವಾರಿಗೆ ಬಾಕಿಯಿವೆ. ಈಗಾಗಲೇ ವಿಲೇವಾರಿಯಾದ ಅರ್ಜಿಗಳನ್ನು ಮತ್ತೊಮ್ಮೆ ಪರಿಶೀಲಿಸಿ ಸಮರ್ಪಕವಾಗಿ ವಿಲೇವಾರಿ ಮಾಡಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ತಿಳಿಸಿದರು.

ಜಿಲ್ಲೆಯಲ್ಲಿ ಜಮೀನು ಮಂಜೂರಾಗಿ ಪೋಡಿಯಾಗದೆ ಉಳಿದಿದ್ದವುಗಳಲ್ಲಿ 20000 ಪೋಡಿ ಮಾಡುವ ಕೆಲಸ ನಡೆಯುತ್ತಿದೆ. ಅದರಿಂದ 28 ಸಾವಿರ ರೈತರಿಗೆ ನೆರವಾಗಲಿದೆ ಎಂದು ತಿಳಿಸಿದರು.

ಜಿಲ್ಲೆಯಲ್ಲಿ ಕಳೆದ ಆರು ತಿಂಗಳಿಂದ 730 ವಸತಿ ಪ್ರದೇಶಗಳನ್ನು ಗುರುತಿಸಲಾಗಿದ್ದು, 29000 ಕುಟುಂಬಗಳು ವಾಸವಿದ್ದಾರೆ. ಅವರಿಗೆ ಹಕ್ಕು ಪತ್ರ ನೀಡಲು ವ್ಯವಸ್ಥೆ ಮಾಡಿಕೊಳ್ಳಲಾಗುತ್ತಿದೆ. ಜನಗಣತಿ ಕಾರ್ಯ ನಡೆಯುತ್ತಿರುವುದರಿಂದ 2027ರ ಜೂನ್ ತಿಂಗಳಲ್ಲಿ ಜನಗಣತಿ ಕಾರ್ಯ ಪೂರ್ಣಗೊಂಡ ನಂತರ ಹಕ್ಕು ಪತ್ರ ನೀಡಲಾಗುವುದು ಎಂದು ಸಚಿವರು ತಿಳಿಸಿದರು.

745 ಅರ್ಜಿ ಸ್ವೀಕಾರ

ಬೇಲೂರಿನಲ್ಲಿ ನಡೆದ ಜನಸ್ಪಂದನ ಕಾರ್ಯಕ್ರಮದಲ್ಲಿ ಅಂಬೇಡ್ಕರ್ ಭವನದ ಜಾಗ ಒತ್ತುವರಿ, ಅಂಗನವಾಡಿ ರಿಪೇರಿ, ಜಮೀನಿಗೆ ದಾರಿ, ಪುರಸಭೆ ಕಾರ್ಮಿಕರಿಗೆ ಪಿ.ಎಫ್. ಹಣ ಕಟ್ಟುವ ಕುರಿತು, ಹಕ್ಕು ಪತ್ರ, ವಿದ್ಯುತ್ ಲೈನ್ ಸ್ಥಳಾಂತರ, ಖಾತೆ ಬದಲಾವಣೆ, ಜಮೀನು ಒತ್ತುವರಿ ತೆರವು, ಇಂಡೀಕರಣ, ಪೋಡಿ ದುರಸ್ಥಿ, ಇ-ಸ್ವತ್ತು, ಕುಡಿಯುವ ನೀರು, ಕಾಂಕ್ರೀಟ್ ರಸ್ತೆ ಮತ್ತಿತರ ವಿಷಯಗಳ ಕುರಿತಂತೆ ಒಟ್ಟು 1610 ಅರ್ಜಿಗಳು ನೊಂದಣಿಯಾಗಿದ್ದು, ಸಂಜೆ 5.30 ರ ಸಮಯಕ್ಕೆ 745 ಅರ್ಜಿಗಳನ್ನು ಸಚಿವರು ಸ್ವೀಕರಿಸಿದರು.

ಸಂಸದ ಶ್ರೇಯಸ್ ಪಟೇಲ್, ಶಾಸಕ ಹೆಚ್.ಕೆ.ಸುರೇಶ್, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ತಾಲ್ಲೂಕು ಅಧ್ಯಕ್ಷ ಆನಂದ ಮೂರ್ತಿ, ನಗರ ಸ್ಥಳೀಯ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಸೈಯದ್ ತೌಫಿಕ್ ಅಹಮದ್, ಪುರಸಭೆಯ ಪ್ರಭಾರಿ ಅಧ್ಯಕ್ಷೆ ಉಷಾ ಸತೀಶ್, ಬಗರ್ ಹುಕುಂ ಸಮಿತಿಯ ಸದಸ್ಯರಾದ ನಾಗೇಗೌಡ, ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭಾನ್ವಿತ, ಉಪ ಅರಣ್ಯ ಸಂರಕ್ಷಣಾಧಿಕಾರಿ ಸೌರಭ್ ಕುಮಾರ್ ಉಪಸ್ಥಿತರಿದ್ದರು.

ಸೆಟ್ ಬ್ಯಾಕ್ ವಿವಾದ ಏ.13 ರಂದು ಪ್ರತಿಭಟನೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಕಟ್ಟಡ ಪರವಾನಗಿ ನೀಡುವಲ್ಲಿ ಹೊಸದಾಗಿ ಅನ್ವಯ ಮಾಡಲು ಹೊರಟಿರುವ ಸೆಟ್ ಬ್ಯಾಕ್ ಕಠಿಣ ನಿಯಮಗಳನ್ನು ಸಡಿಲಿಸುವಂತೆ ಆಗ್ರಹಿಸಿ ಏ. 13 ರಂದು ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಮುಖಂಡರಾದ ಸುನಿಲ್ ಕುಮಾರ್ ಹಾಗೂ ಮಳಲಿ ಶರತ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿ, ರಾಜ್ಯದಲ್ಲಿ ಒಂದೇ ರೀತಿಯ ಕಾನೂನು ಇದ್ದರೂ, ಅದರ ಅನುಷ್ಠಾನದಲ್ಲಿ ತಾರತಮ್ಯ ನಡೆಯುತ್ತಿದೆ. ಬೆಂಗಳೂರು ಜನತೆಗೆ ಒಂದು ರೀತಿಯ ನ್ಯಾಯ, ಹಾಸನದ ಜನತೆಗೆ ಮತ್ತೊಂದು ರೀತಿಯ ನ್ಯಾಯ ನೀಡಲಾಗುತ್ತಿದೆ. ಇದನ್ನು ಒಪ್ಪಲಾಗದು ಎಂದು ಖಂಡಿಸಿದರು.

ಗ್ರೇಟರ್ ಬೆಂಗಳೂರು ಅಥಾರಿಟಿ ವ್ಯಾಪ್ತಿಯಲ್ಲಿ ಕಟ್ಟಡ ಪರವಾನಿಗೆ ಸೆಟ್ ಬ್ಯಾಕ್ ನಿಯಮಗಳಲ್ಲಿ ಸಡಿಲಿಕೆ ನೀಡಿರುವುದನ್ನು ಉದಾಹರಣೆಯಾಗಿ ಉಲ್ಲೇಖಿಸಿದ ಅವರು, ಅದೇ ರೀತಿಯ ಸೌಲಭ್ಯವನ್ನು ಹಾಸನ ಜಿಲ್ಲೆಯ ಜನರಿಗೂ ನೀಡಬೇಕು ಎಂದು ಒತ್ತಾಯಿಸಿದರು.

ರಾಜ್ಯದ ಎಲ್ಲಾ ನಾಗರಿಕರು ಸಮಾನರು. ಹೀಗಿರುವಾಗ ನಿಯಮಗಳಲ್ಲಿ ವ್ಯತ್ಯಾಸ ಮಾಡುವುದು ಸರಿಯಲ್ಲ. ನಮ್ಮ ಕನಸಿನ ಮನೆ ಕಟ್ಟಿಕೊಳ್ಳಲು ಕಠಿಣ ನಿಯಮಗಳು ಅಡ್ಡಿಯಾಗಬಾರದು ಎಂದು ಹೇಳಿದರು.

ಸಾಮಾನ್ಯ ಮಧ್ಯಮ ವರ್ಗದ ಜನರು ಜೀವನಪೂರ್ತಿ ಸಂಗ್ರಹಿಸಿದ ಹಣದಿಂದ ಮನೆ ನಿರ್ಮಾಣಕ್ಕೆ ಮುಂದಾದಾಗ, ಸ್ಟೇಟ್‌ಬ್ಯಾಕ್ ನಿಯಮಗಳ ಕಟ್ಟುನಿಟ್ಟಿನಿಂದ ಸಂಕಷ್ಟ ಎದುರಿಸಬೇಕಾಗುತ್ತಿದೆ.

ಸಣ್ಣ ಜಾಗಗಳಲ್ಲಿ ಮನೆ ಕಟ್ಟಲು ಸಾಧ್ಯವಾಗದೇ ಹಲವರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಇದರಿಂದ ಜನರ ಕನಸುಗಳೇ ಕುಸಿಯುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಅವರು ಬೇಸರ ವ್ಯಕ್ತಪಡಿಸಿದರು.

ಈ ಹಿನ್ನೆಲೆಯಲ್ಲಿ ಏಪ್ರಿಲ್ 13 ರಂದು ಸೋಮವಾರ ಬೆಳಿಗ್ಗೆ 10 ಗಂಟೆಗೆ ಹಾಸನ ನಗರದ ಮಹಾರಾಜ ಪಾರ್ಕ್‌ನ ಹೇಮಾವತಿ ಪ್ರತಿಮೆಯಿಂದ ಜಿಲ್ಲಾಧಿಕಾರಿ ಕಚೇರಿ ವರೆಗೆ ಭಾರೀ ಪ್ರತಿಭಟನೆ ಹಾಗೂ ರಾಲಿ ನಡೆಯಲಿದೆ. ಪ್ರತಿಭಟನೆ ಬಳಿಕ ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಲಾಗುವುದು ಎಂದು ಮಾಹಿತಿ ನೀಡಿದರು.

ಮಂಜುನಾಥ್, ಫಾರೂಕ್, ನಯಾಜ್, ಸುನಿಲ್, ದರ್ಶನ್, ಪುನೀತ್ ಉಪಸ್ಥಿತರಿದ್ದರು.

ಸೆಟ್ ಬ್ಯಾಕ್ ವಿಚಾರಕ್ಕೆ ವಿವಾದ-ಮಾರಾಮಾರಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಮನೆ ನಿರ್ಮಾಣ ಮಾಡುವಾಗ ಸೆಟ್ ಬ್ಯಾಕ್ ಬಿಡದೆ ಕಾಂಪೌಂಡ್ ನಿರ್ಮಿಸಿದ್ದನ್ನು ಪ್ರಶ್ನಿಸಿದ್ದಕ್ಕೆ ಪಕ್ಕದ ಮನೆಯವರು ವೃದ್ಧ ದಂಪತಿ ಹಾಗೂ ಮಹಿಳೆಯರ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿರುವ ಘಟನೆ ನಗರದ ಚನ್ನಪಟ್ಟಣದಲ್ಲಿ ನಡೆದಿದೆ.

ಬಡಾವಣೆಯ ನಿವಾಸಿ ಸಿ.ಎನ್. ಶಿವಪ್ಪ ಅವರ ಪಕ್ಕದ ಮನೆಯ ಕಲ್ಪನಾ ಶಂಕರೇಗೌಡ ಅವರು ಮನೆ ನಿರ್ಮಾಣದ ವೇಳೆ ನಿಯಮಾನುಸಾರ ಒಂದೂವರೆ ಅಡಿ ಸೆಟ್ ಬ್ಯಾಕ್ ಬಿಡದೇ

ಕಟ್ಟಡ ನಿರ್ಮಿಸಿದ್ದಾರೆ ಎನ್ನಲಾಗಿದೆ. ಅಲ್ಲದೆ ಶಿವಪ್ಪ ಅವರು ಬಿಟ್ಟಿದ್ದ ಸೆಟ್ ಬ್ಯಾಕ್ ಪ್ರದೇಶದಲ್ಲೇ ಕೌಂಪೌಂಡ್ ನಿರ್ಮಾಣ ಮಾಡಿರುವುದರಿಂದ ಓಡಾಟಕ್ಕೆ ಅಡಚಣೆ ಉಂಟಾಗಿತ್ತು.

ಈ ಹಿನ್ನಲೆಯಲ್ಲಿ ಶುಕ್ರವಾರ ಶಿವಪ್ಪ ಅವರ ಪುತ್ರ ಹರಿಪ್ರಸಾದ್ ಕೌಂಪೌಂಡ್ ತೆರವುಗೊಳಿಸಲು ಮುಂದಾಗಿದ್ದ ವೇಳೆ ವಿವಾದ ಶುರುವಾಗಿದೆ. ಈ ವೇಳೆ ಕಲ್ಪನಾ, ಕಿಟ್ಟಿ, ನಂದಿನಿ, ಸ್ವಸ್ತಿಕ್, ಶಂಕರೇಗೌಡ, ಭೂಮಿಕಾ, ಸುಪ್ರಿತಾ, ಪಾಪು ಹಾಗೂ ಮಂಜೇಗೌಡ ಸೇರಿ ವೃದ್ಧರಾದ ಶಿವಪ್ಪ, ಅವರ ಪತ್ನಿ ಹಾಗೂ ಮಕ್ಕಳಾದ ಸೌಮ್ಯ ಮತ್ತು ಹರಿಪ್ರಸಾದ್ ಮೇಲೆ ಹಲ್ಲೆ ನಡೆಸಿದ್ದಾರೆ.

ಘಟನೆಯಲ್ಲಿ ಗಂಭೀರವಾಗಿ ಗಾಯಗೊಂಡಿರುವ ಶಿವಪ್ಪ ಅವರ ಪತ್ನಿ ಆಸ್ಪತ್ರೆಗೆ ದಾಖಲಾಗಿದ್ದು ಚಿಕಿತ್ಸೆ ಪಡೆಯುತ್ತಿದ್ದಾರೆ.

ಈ ಸಂಬಂಧ ಬಡಾವಣೆ ಠಾಣೆಯಲ್ಲಿ ದೂರು ದಾಖಲಾಗಿದ್ದು, ಹಲ್ಲೆ ನಡೆಸಿದ ಆರೋಪಿಗಳನ್ನು ತಕ್ಷಣ ಬಂಧಿಸಿ ನ್ಯಾಯ ಒದಗಿಸುವಂತೆ ಶಿವಪ್ಪ ಕುಟುಂಬಸ್ಥರು ಆಗ್ರಹಿಸಿದ್ದಾರೆ.

ಹಾಸನದಲ್ಲಿ ಚಂದ್ರ ಪ್ರಸಾದ್ ತ್ಯಾಗಿ ಜನ್ಮ ದಿನಾಚರಣೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಕರ್ನಾಟಕದ ದಲಿತ ಚಳವಳಿಯ ನೇತಾರ, ದಲಿತ ಸಂಘರ್ಷ ಸಮಿತಿ ಸಂಸ್ಥಾಪಕ ಸದಸ್ಯ ಹಾಗೂ ರಾಜ್ಯ ಸಂಚಾಲಕರಾಗಿದ್ದ ಬಿ.ವಿ ಚಂದ್ರಪ್ರಸಾದ್ ತ್ಯಾಗಿಯವರ 75ನೇ ಜನ್ಮ ದಿನವನ್ನು ಇತ್ತೀಚೆಗೆ ನಗರದ ಶ್ರಮ ಕಚೇರಿಯಲ್ಲಿ ಆಚರಿಸಲಾಯಿತು.

ದಲಿತ-ಜನಪರ ಸಂಘಟನೆಗಳು ಮುಖಂಡರು ಹಾಗೂ ತ್ಯಾಗಿಯವರ ಒಡನಾಡಿಗಳು, ಅಭಿಮಾನಿಗಳು ಭಾಗವಹಿಸಿ ಅವರ ಬದುಕು ಮತ್ತು ಹೋರಾಟಗಳ ಕುರಿತು ಮಾತನಾಡುವ ಮೂಲಕ ಸ್ಮರಿಸಿಕೊಳ್ಳಲಾಯಿತು.

ಚಂದ್ರಪ್ರಸಾದ್ ತ್ಯಾಗಿ 75ನೇ ಜನ್ಮ ವರ್ಷಾಚರಣೆ ಭಾಗವಾಗಿ ದಲಿತ-ತಳ ಸಮುದಾಯಗಳು ಪ್ರಸ್ತುತ ಎದುರಿಸುತ್ತಿರುವ ಸಮಸ್ಯೆಗಳು, ಬಿಕ್ಕಟ್ಟು, ಸವಾಲುಗಳನ್ನು ದಲಿತ ಐಕ್ಯತೆಯಿಂದ ಎದುರಿಸಲು ಈ ವರ್ಷ ಮುಂದಿನ ದಿನಗಳಲ್ಲಿ ವಿಚಾರ ಗೋಷ್ಠಿ, ಚಿಂತನೆ ಕಾರ್ಯಕ್ರಮಗಳನ್ನು ನಡೆಸಲು ತೀರ್ಮಾನಿಸಲಾಯಿತು.

ತ್ಯಾಗಿಯವರು ತಾಯಿ ಹೃದಯದ ಸಂಘಟನಾಕಾರರಾಗಿದ್ದು, ಐಕ್ಯ ಭಾವನೆಯಿಂದ ಅಸ್ಪೃಶ್ಯತೆ, ಜಾತಿ ತಾರತಮ್ಯಗಳ ವಿರುದ್ಧ, ಭೂಮಿ ಹಕ್ಕಿಗಾಗಿ ದಲಿತರನ್ನು ಒಂದು ವರ್ಗವಾಗಿ ಸಂಘಟಿಸಿ ಅನೇಕ ಹೋರಾಟಗಳಿಗೆ ನೇತೃತ್ವದ ನೀಡುತ್ತಿದ್ದರು.

ಸಾಮಾಜಿಕ ಆರ್ಥಿಕವಾಗಿ ವಂಚನೆಗೆ ಒಳಗಾಗಿರುವ ದಲಿತ ಸಮುದಾಯದಲ್ಲಿ ಮೀಸಲಾತಿ, ಒಳ ಮೀಸಲಾತಿ ವಿಷಯದಲ್ಲಿ ಅನಗತ್ಯ ಗೊಂದಲ ಸೃಷ್ಟಿಸಿ ಒಡಕು ಉಂಟುಮಾಡಲಾಗುತ್ತಿದೆ. ಇದರ ಹಿಂದೆ ಮನುವಾದಿ ಶಕ್ತಿಗಳ, ಆಳುವ ವರ್ಗಗಳ ಹುನ್ನಾರ ಇದೆ. ಇದನ್ನು ದಲಿತ ಸಮುದಾಯಕ್ಕೆ ಅರ್ಥ ಮಾಡಿಸುವ ಅತ್ಯಗತ್ಯ ಇದಾಗಿದೆ. ಕೇವಲ ಮೀಸಲಾತಿ, ಒಳ ಮೀಸಲಾತಿಯಲ್ಲ ಆಳುವ ಸರ್ಕಾರಗಳ ಖಾಸಗೀಕರಣ, ಉದಾರೀಕರಣ ನೀತಿಗಳಿಂದಾಗಿ ಇರುವ ಮೀಸಲಾತಿ ಅವಕಾಶಗಳೇ ಕ್ಷೀಣಿಸುತ್ತಿರುವ ಇಂತಹ ಸಂಧರ್ಭದಲ್ಲಿ ಖಾಸಗೀ ಕ್ಷೇತ್ರದಲ್ಲೂ ಮೀಸಲಾತಿ ಜಾರಿಗಾಗಿ ದಲಿತರು ಒಗ್ಗಟ್ಟಿನಿಂದ ಹೋರಾಟ ನಡೆಸಬೇಕಿದೆ. ಭೂಮಿ, ನಿವೇಶನ ಎಲ್ಲಾ ಸಂಪತ್ತಿನಲ್ಲಿ ದಲಿತರು ತಮ್ಮ ಪಾಲು ಕೇಳಬೇಕಿದೆ. ಅಂತಹ ಪ್ರಜ್ಞೆ ಮತ್ತು ತಾತ್ವಿಕ ಚಿಂತನೆಗಳನ್ನು ಬೆಳಸಿಕೊಳ್ಳಬೇಕಿದೆ. ಈ ಹಿನ್ನೆಲೆಯಲ್ಲಿ ಚಂದ್ರಪ್ರಸಾದ್ ಪ್ರಸಾದ್ ತ್ಯಾಗಿಯವರ 75 ನೇ ವರ್ಷಾಚರಣೆನ್ನು ನಡೆಸಬೇಕಿದೆ ಎಂದು ತೀರ್ಮಾನಿಸಲಾಯಿತು.

ದಲಿತ ಮುಖಂಡರಾದ ರಾಜಶೇಖರ್ ಹುಲಿಕಲ್, ಎಚ್. ಕೆ.ಸಂದೇಶ್, ವೀರಭದ್ರಯ್ಯ, ಕೃಷ್ಣದಾಸ್, ಸಿಪಿಐಎಂ ಮುಖಂಡರಾದ ಧರ್ಮೇಶ್, ನಿವೃತ್ತ ಪ್ರಾಂಶುಪಾಲ ಅತ್ನಿ ಕೃಷ್ಣಯ್ಯ, ಮಾದಿಗ ದಂಡೋರ ಮುಖಂಡರಾದ ಟಿ.ಆರ್. ವಿಜಯ್ ಕುಮಾರ್, ಪತ್ರಕರ್ತ ಪ್ರಸನ್ನ ಕುಮಾರ್, ಲೇಖಕ ಗುರುಮೂರ್ತಿ ಮಾತನಾಡಿದರು.

ಡಿಎಚ್‌ಎಸ್ ಜಿಲ್ಲಾ ಸಂಚಾಲಕ ಎಂ.ಜಿ. ಪೃಥ್ವಿ ನಿರ್ವಹಿಸಿದರು. ಕಾರ್ಯಕ್ರಮದಲ್ಲಿ ರೈತ ಮುಖಂಡ ನವೀನ್ ಕುಮಾರ್, ಸಾಹಿತಿ ಹರೀಶ್ ಕಟ್ಟೆಬೆಳಗಲಿ ತೋಟೇಶ್ ನಿಟ್ಟೂರು ಸೇರಿದಂತೆ ಹಲವರು ಭಾಗವಹಿಸಿದ್ದರು.

75 ಲಕ್ಷ ರೂ. ವೆಚ್ಚದ ರಸ್ತೆ ಕಾಮಗಾರಿಗೆ ಭೂಮಿಪೂಜೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಅರಸೀಕೆರೆ: ಎತ್ತಿನಹೊಳೆ ಯೋಜನೆಯಡಿ ತಾಲ್ಲೂಕಿನ ಗಂಡಸಿ ಹೋಬಳಿ ಮುದುಡಿ-ಸಿದ್ದಾಪುರ ಗ್ರಾಮದಲ್ಲಿ 75 ಲಕ್ಷರೂ. ವೆಚ್ಚದ ಸಿಸಿ ರಸ್ತೆ ಕಾಮಗಾರಿಗೆ ಶುಕ್ರವಾರ ಶಾಸಕ ಕೆ.ಎಂ. ಶಿವಲಿಂಗೇಗೌಡ ಭೂಮಿಪೂಜೆ ನೆರವೇರಿಸಿದರು. ಈ ವೇಳೆ ಮಾತನಾಡಿದ ಅವರು, ಯಾರು ಏನೇ ಟೀಕೆ ಟಿಪ್ಪಣಿ ಮಾಡಿದರೂ ಜನಸೇವೆಯಿಂದ ವಿಮುಖನಾಗುವುದಿಲ್ಲ, ಜನರ ಆಶೀರ್ವಾದ ಇರುವ ವರೆಗೆ ರಾಜಕೀಯದಲ್ಲಿರುತ್ತೇನೆ ಎಂದರು.

ನಮ್ಮ ಕ್ಷೇತ್ರ ನೀರಾವರಿ ಸೌಲಭ್ಯ ವಂಚಿತ



ಬಯಲು ಸೀಮೆ ಪ್ರದೇಶ. ನಾನು ಶಾಸಕನಾದ ಮೇಲೆ ಹೋರಾಟದ ಫಲವಾಗಿ ಕುಡಿಯುವ ನೀರಿಗಾಗಿ ಎತ್ತಿನಹೊಳೆ ಯೋಜನೆ ಕಾರ್ಯರೂಪಗೊಂಡಿದೆ. ನನ್ನ ಅವಧಿಯಲ್ಲೇ ಕಾಮಗಾರಿ ಅಂತಿಮ ಹಂತ ತಲುಪಿದೆ. ಕೆಲವೇ ದಿನಗಳಲ್ಲಿ ಕಾಲುವೆ ಮೂಲಕ ನೀರು ಹರಿಯುತ್ತದೆ. ಅಭಿವೃದ್ಧಿ ಕಾಮಗಾರಿ ಸಹಿಸದೆ ಕೆಲವರು ಇಲ್ಲಸಲ್ಲದ ಆರೋಪ ಮಾಡುತ್ತಾರೆ. ಆಧಾರ ರಹಿತ ಆರೋಪಗಳಿಗೆ ನಾನು ತಲೆ ಕೆಡಿಸಿಕೊಳ್ಳುವುದಿಲ್ಲ, ಕ್ಷೇತ್ರದ ಜನರ ಆಶೀರ್ವಾದ ಇರುವವರೆಗೆ ರಾಜಕೀಯದಲ್ಲಿರುತ್ತೇನೆಂದರು. ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಮುದುಡಿ ವಿಶ್ವಣ್ಣ, ಎಪಿಎಂಸಿ ಮಾಜಿ ಅಧ್ಯಕ್ಷ ಶಿವಪ್ಪ, ಮುಖಂಡರಾದ ಶಂಭುಲಿಂಗೇಗೌಡ, ನಂದನ್, ಚಂದ್ರಶೇಖರ, ವೆಂಕಟೇಶ್, ಪ್ರಕಾಶ್, ಶಿವಣ್ಣ, ಅಭಿ, ಚಂದ್ರು, ಕೃಷ್ಣನಾಯ್ಕ ಕುಮಾರ, ಜಯಣ್ಣ, ರಮೇಶ್, ಗುತ್ತಿಗೆದಾರ ಜ್ಞಾನೇಶ್ ಹಾಗೂ ಇತರರಿದ್ದರು.

ಶಾಸಕ ಸ್ವರೂಪ್‌ಗೆ 43ನೇ ಹುಟ್ಟು ಹಬ್ಬದ ಸಂಭ್ರಮ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಶಾಸಕ ಹೆಚ್.ಪಿ.ಸ್ವರೂಪ್ ಅವರು ಶುಕ್ರವಾರ ತಮ್ಮ 43ನೇ ಹುಟ್ಟುಹಬ್ಬ ಆಚರಿಸಿಕೊಂಡರು.

ಜೆಡಿಎಸ್ ಕಾರ್ಯಕರ್ತರು ಹಾಗೂ ಅಭಿಮಾನಿಗಳು, ಕುಟುಂಬ ಸದಸ್ಯರೊಂದಿಗೆ ವಿವಿಧ ದೇವಾಲಯಗಳಿಗೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದ ಶಾಸಕರು, ನಗರದ ಆದಿಚುಂಚನಗಿರಿ ಮಠಕ್ಕೆ ಭೇಟಿ ಶ್ರೀ ಶಂಭುನಾಥ ಸ್ವಾಮೀಜಿ ಅವರ ಆಶೀರ್ವಾದ ಪಡೆದರು.

ಬಳಿಕ ಅವರ ನಿವಾಸದ ಎದುರು ಜಮಾಯಿಸಿದ ನೂರಾರು ಮಂದಿ ಅಭಿಮಾನಿಗಳು ತಮ್ಮ ನೆಚ್ಚಿನ ಶಾಸಕರಿಗೆ ಬಗೆ ಬಗೆಯ ಹೂವಿನ ಹಾರ ಹಾಕಿ, ಬಣ್ಣ ಬಣ್ಣದ ಕೇಕ್ ಕತ್ತರಿಸಿ ಶುಭಾಶಯ ಕೋರಿದರು. ಇನ್ನೂ ಕೆಲವರು ಕ್ರೇನ್ ಮೂಲಕ ಬೃಹತ್ ಗಾತ್ರದ ಸೇಬಿನ ಹಾರ ಹಾಕಿ ಅಭಿಮಾನ ಮೆರೆದರು. ಸಾರ್ವಜನಿಕರಿಗೆ ಅನ್ನದಾನದ ವ್ಯವಸ್ಥೆ ಮಾಡಲಾಗಿತ್ತು. ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಸೇರಿ ವಿವಿಧ ರಾಜಕೀಯ ನಾಯಕರು ಶಾಸಕರಿಗೆ ಹುಟ್ಟು ಹಬ್ಬದ ಶುಭಾಶಯ ಕೋರಿದ್ದಾರೆ.

ಫಲಿತಾಂಶ ತಡೆ: ಕಾನೂನು ವಿದ್ಯಾರ್ಥಿಗಳ ಪ್ರತಿಭಟನೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಸರ್ಕಾರಿ ಕಾನೂನು ಕಾಲೇಜಿನ 24 ವಿದ್ಯಾರ್ಥಿಗಳ ಸೆಮಿಸ್ಟರ್ ಫಲಿತಾಂಶ ಪ್ರಕಟಿಸದೆ ಅನ್ಯಾಯ ಮಾಡಲಾಗುತ್ತಿದೆ ಎಂದು ಆರೋಪಿಸಿ ವಿದ್ಯಾರ್ಥಿಗಳು ಶುಕ್ರವಾರ ಕಾಲೇಜಿಗೆ ಬೀಗ ಹಾಕಿ ಪ್ರತಿಭಟನೆ ನಡೆಸಿದರು.

ಸರ್ಕಾರಿ ಕಾನೂನು ಕಾಲೇಜಿನ ಆಡಳಿತ ಮಂಡಳಿ ಹಾಗೂ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಮಲತಾಯಿ ಧೋರಣೆ ಖಂಡಿಸಿ ವಿದ್ಯಾರ್ಥಿಗಳು ನ್ಯಾಯಕ್ಕಾಗಿ ಬೀದಿಗಿಳಿದು ಹೋರಾಟ ಮಾಡುವಂತಾಗಿದೆ. ಪ್ರತಿವರ್ಷ 60 ವಿದ್ಯಾರ್ಥಿಗಳಿಗಿಂತ ಹೆಚ್ಚು ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳಲು ಕಾಲೇಜು ಆಡಳಿತಕ್ಕೆ ಅಧಿಕಾರ ಇರುವುದಿಲ್ಲ, ಆದರೆ, 2022-23ನೇ ಸಾಲಿನಲ್ಲಿ ಬೇಡಿಕೆ ಹೆಚ್ಚಿದ್ದ ಕಾರಣ ಬಾರ್ ಕೌನ್ಸಿಲ್ ಆಫ್ ಇಂಡಿಯಾ ಹಾಗೂ ಹುಬ್ಬಳ್ಳಿ ಕಾನೂನು ವಿಶ್ವವಿದ್ಯಾಲಯಕ್ಕೆ ಹೆಚ್ಚು ವಿದ್ಯಾರ್ಥಿಗಳ ದಾಖಲಾತಿಗೆ ಮನವಿ ಮಾಡಿ ಹೇಗೋ ಅನುಮತಿ ಸಿಗುತ್ತದೆಂಬ ಭರವಸೆಯಲ್ಲಿ 60+60 ಅಂದರೆ 120 ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಯಿತು. ಆಗ ದಾಖಲಾದ ವಿದ್ಯಾರ್ಥಿಗಳು ಪ್ರತಿ ಸೆಮಿಸ್ಟರ್ ಪರೀಕ್ಷೆಯನ್ನು ಆತಂಕದಲ್ಲೇ ಬರೆದಿದ್ದಾರೆ. ಮೊದಲ ವರ್ಷದಿಂದ 3ನೇ ವರ್ಷದ ವರೆಗೆ ಪರೀಕ್ಷಾ ಪ್ರವೇಶಾತಿ ಪತ್ರ ಮತ್ತು ಫಲಿತಾಂಶ

ಪ್ರಕಟಿಸಿದ ಕಾನೂನು ವಿಶ್ವವಿದ್ಯಾಲಯ ಈ ವಿದ್ಯಾರ್ಥಿಗಳು ನಾಲ್ಕನೇ ವರ್ಷಕ್ಕೆ ಬಂದ ನಂತರ ಪ್ರವೇಶ ಪತ್ರ ನೀಡಲು ನಿರಾಕರಿಸಿತು. ಕಾನೂನು ವಿದ್ಯಾರ್ಥಿಗಳು ಪರೀಕ್ಷಾ ಹಿಂದಿನ ದಿನದ ವರೆಗೆ ಪ್ರತಿಭಟನೆ ಮಾಡಿ ಸ್ಥಳೀಯ ಶಾಸಕರು, ಸಂಸದರು ಹಾಗು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರ ಮೇಲೆ ಒತ್ತಡ ಹಾಕಿ ಪ್ರವೇಶ ಪತ್ರ ಪಡೆಯಲು ಯಶಸ್ವಿಯಾಗಿದ್ದರು.

ಕೆಲ ದಿನಗಳ ಹಿಂದೆಯಷ್ಟೇ ಕಾನೂನು ವಿದ್ಯಾರ್ಥಿಗಳ ಫಲಿತಾಂಶ ಪ್ರಕಟವಾಗಿದ್ದು, ಹೆಚ್ಚುವರಿಯಾಗಿ ದಾಖಲಾಗಿದ್ದ ವಿದ್ಯಾರ್ಥಿಗಳ ಫಲಿತಾಂಶವನ್ನು ತಡೆ ಹಿಡಿಯಲಾಗಿದೆ. ಕಾರಣ ಕೇಳಿದರೆ ಅನುಮತಿ ಇಲ್ಲದೆ ದಾಖಲಾತಿ ಮಾಡಲಾಗಿದ್ದು, ಅದಕ್ಕೆ ನಾವು ಹೊಣೆಗಾರರಲ್ಲ ನೀವುಂಟು ನಿಮ್ಮ ಕಾಲೇಜು ಆಡಳಿತ ಮಂಡಳಿಯುಂಟು ಎಂದು ವಿಶ್ವ ವಿದ್ಯಾಲಯ ಪ್ರತಿಕ್ರಿಯಿಸಿದೆ.

2022-23ನೇ ಸಾಲಿನಲ್ಲಿ ಹೆಚ್ಚುವರಿ ದಾಖಲಾತಿ ಪಡೆದು ಇದೇ ರೀತಿಯ ಸಮಸ್ಯೆ ಎದುರಿಸುತ್ತಿದ್ದ ಚಿಕ್ಕಮಗಳೂರಿನ ಶಾರದಾ ಕಾಲೇಜು, ಶಿವಮೊಗ್ಗದ ನ್ಯಾಷನಲ್ ಕಾಲೇಜು ಹಾಗು ಬೆಂಗಳೂರಿನ ಕಾಲೇಜಿನ ಸಮಸ್ಯೆಯನ್ನು ವಿಶ್ವವಿದ್ಯಾಲಯ ಬಗೆಹರಿಸಿದೆ.

ಆದರೆ ಸರ್ಕಾರಿ ಕಾಲೇಜುಗಳನ್ನು ಮಾತ್ರ ನಿರ್ಲಕ್ಷ್ಯಿಸಿದೆ. ವಕೀಲರಾಗಬೇಕೆಂದು ಕನಸು ಕಂಡು ಸರ್ಕಾರಿ ಕಾಲೇಜಿನಲ್ಲಿ ಪ್ರವೇಶ ಪಡೆದಿದ್ದ ಬಡ ವಿದ್ಯಾರ್ಥಿಗಳಿಗೆ ಸಮಸ್ಯೆ ಎದುರಾಗಿದೆ. ಇಲ್ಲಿ ವಿಶ್ವವಿದ್ಯಾಲಯದ ಮಲತಾಯಿ ಧೋರಣೆ ಸ್ಪಷ್ಟವಾಗಿದ್ದು ಖಾಸಗಿ ಕಾನೂನು ಕಾಲೇಜಿಗೆ ಒಂದು ನ್ಯಾಯ ಸರ್ಕಾರಿ ಕಾಲೇಜುಗಳಿಗೆ ಒಂದು ನ್ಯಾಯ ಎಬಂತಾಗಿದೆ.

ಕಾನೂನು ವಿದ್ಯಾರ್ಥಿ ಕಾಂತರಾಜು ಮಾತನಾಡಿ, ಮೊದಲನೇ ಸೆಮಿಸ್ಟರ್ ನಲ್ಲಿ ಯಾವುದೇ ಸಮಸ್ಯೆ ಆಗಿಲ್ಲ. ಎರಡನೇ ಸೆಮಿಸ್ಟರ್‌ನ ಫಲಿತಾಂಶ ಪ್ರಕಟವಾಗಲಿಲ್ಲ. ಕೇಳಿದರೆ ಬಿಸಿಐನಿಂದ ನಿಮಗೆ ಅನುಮತಿ ದೊರೆತಿಲ್ಲ. ಆದ್ದರಿಂದ ನಿಮ್ಮ ಫಲಿತಾಂಶ ಪ್ರಕಟ ಮಾಡಲು ಸಾಧ್ಯವಿಲ್ಲ ಎಂದು ಹೇಳಿದ್ದರು. ನಂತರ ಕಾಲೇಜು ಆಡಳಿತ ಮಂಡಳಿ ಅನುಮತಿ ಪಡೆಯುವುದಾಗಿ ಹೇಳಿ ಫಲಿತಾಂಶ ಪ್ರಕಟಗೊಳಿಸಿದ್ದರು. ಪ್ರತೀ ಬಾರಿ ಪರೀಕ್ಷೆ ಬರೆದಾಗಲೂ ಇದೇ ರೀತಿ ತೊಂದರೆ ಆಗುತ್ತಿದ್ದು, ಮೂರನೇ ವರ್ಷದ ವರೆಗೂ ಫಲಿತಾಂಶ ಪ್ರಕಟ ಮಾಡಿ ಅಂಕಪಟ್ಟಿಯೂ ದೊರೆತಿದೆ. ಆದರೆ ಈ ಬಾರಿ ನಾಲ್ಕನೇ ವರ್ಷದ ಪರೀಕ್ಷೆಯ ಫಲಿತಾಂಶವನ್ನು ಪ್ರಕಟಿಸಿಲ್ಲ. ನಮ್ಮ ವಿದ್ಯಾಭ್ಯಾಸ ಇನ್ನು ಒಂದು ವರ್ಷ ಬಾಕಿ ಇದ್ದು, ಇದೇ ರೀತಿ ಮುಂದುವರಿದರೆ ನಾವು ವ್ಯಾಸಂಗ ಮಾಡಿರುವ 5 ವರ್ಷದ ಕಾನೂನು ಪದವಿಗೆ ಮಾನ್ಯತೆ ಸಿಗುವುದಿಲ್ಲ ಎಂದರು.

ಅರಸೀಕೆರೆಯಲ್ಲಿ ರಾಜಕೀಯ ದೊಂಬರಾಟ ನಡೆಯೋದಿಲ್ಲ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಅರಸೀಕೆರೆ: ನಗರದ ಪಿಪಿ ವೃತ್ತದಲ್ಲಿ ಇತ್ತೀಚೆಗೆ ದಂಪತಿ ಮೇಲೆ ನಡೆದ ಹಲ್ಲೆ ಪ್ರಕರಣ ನೋವು ತರಿಸಿದ್ದು, ಅದನ್ನೇ ಬಂಡವಾಳ ಮಾಡಿಕೊಂಡು ಶಾಂತವಾಗಿರುವ ನಗರದಲ್ಲಿ ಉದ್ವಿಗ್ನ ಸ್ಥಿತಿ ಸೃಷ್ಟಿಸಬೇಡಿ ಎಂದು ಶಾಸಕ ಕೆ.ಎಂ. ಶಿವಲಿಂಗೇಗೌಡ ಹೇಳಿದರು.

ಸುದ್ದಿಗಾರರೊಂದಿಗೆ ಗುರುವಾರ ಮಾತನಾಡಿದ ಅವರು, ಸ್ವಾರ್ಥದ ರಾಜಕೀಯ ದೊಂಬರಾಟ ಇಲ್ಲಿ ನಡೆಯುವುದಿಲ್ಲ. ಅರಸೀಕೆರೆಯಲ್ಲಿ ಹಿಂದೂ-ಮುಸ್ಲಿಂ ಸಮುದಾಯದ ಜನರು ಸೌಹಾರ್ದತೆ ಮತ್ತು ಭಾವೈಕ್ಯತೆಯಿಂದ ಬದುಕುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಸಣ್ಣ ಮಟ್ಟಿನ ಮಾತಿನ ಚಕಮಕಿಯನ್ನು ರಾಜಕೀಯ ಉದ್ದೇಶಕ್ಕೆ ಬಳಸಿಕೊಳ್ಳುವುದು ಸರಿಯಲ್ಲ ಎಂದರು.

ನಗರಸಭೆ ಮಾಜಿ ಅಧ್ಯಕ್ಷ ಸಮಿವುಲ್ಲಾ ಅವರ ಪುತ್ರನಿಗೆ ಸಂಬಂಧಿಸಿ ನಡೆದ ಘಟನೆಯಲ್ಲಿ, ಆರಂಭದಲ್ಲಿ ಉಂಟಾದ ಮಾತಿನ ಚಕಮಕಿಯ ನಂತರ ಸಂಬಂಧಪಟ್ಟ ಎರಡು ಕುಟುಂಬಗಳೂ ಸಂಜೆಯೊಳಗೆ ರಾಜಿ ಮಾಡಿಕೊಂಡು, ಲಿಖಿತವಾಗಿ ಸಹ ಒಪ್ಪಂದ ಮಾಡಿಕೊಂಡಿರುವ ಮಾಹಿತಿ ಇದೆ. ಆದರೆ, ಈ ವಿಚಾರವನ್ನು ಕೆಲವರು ರಾಜಕೀಯ ಲಾಭಕ್ಕಾಗಿ ದೊಡ್ಡದಾಗಿ ಬಿಂಬಿಸಿ ನಗರದಲ್ಲಿ ಬಂದ್ ಕರೆ ನೀಡುವ ಮೂಲಕ ಕೋಮು ಸೌಹಾರ್ದ ಕದಡುವ ಪ್ರಯತ್ನ ನಡೆಸಿದ್ದಾರೆಂದರು.

ಗಲಾಟೆಯಲ್ಲಿ ನೇರವಾಗಿ ಭಾಗಿಯಾಗಿದ್ದವರೇ ಸಮಾಧಾನದಿಂದ ವಿಷಯವನ್ನು ಮುಕ್ತಾಯಗೊಳಿಸಲು ಮುಂದಾಗಿರುವಾಗ ರಾಜಕೀಯ ಪ್ರೇರಿತ ವ್ಯಕ್ತಿಗಳು ಅದನ್ನು ಮತ್ತಷ್ಟು ಪ್ರಚೋದಿಸುವುದು ಸರಿಯಲ್ಲ. ಅರಸೀಕೆರೆಯ ಜನರು ಶಾಂತಿ, ಸಹಿಷ್ಣುತೆ ಮತ್ತು ಸಹಬಾಳ್ವೆಯ ಮೌಲ್ಯಗಳನ್ನು ಉಳಿಸಿಕೊಂಡು ಬಂದಿದ್ದಾರೆ. ದ್ವೇಷ ಬೀಜ ಬಿತ್ತಲು ಯಾರಿಗೂ ಅವಕಾಶ ನೀಡಬಾರದೆಂದರು.

ಘಟನೆ ನಡೆದಿರುವುದೇ ವಿಷಾದನೀಯ. ಯಾವುದೇ ಕಾರಣಕ್ಕೂ ಕಾನೂನನ್ನು ಕೈಗೆತ್ತಿಕೊಳ್ಳುವುದು, ರಸ್ತೆಗೆ ಇಳಿದು ಉದ್ವಿಗ್ನತೆ ಸೃಷ್ಟಿಸುವುದು ಅಥವಾ ಸಮುದಾಯಗಳ ನಡುವೆ ಅವಿಶ್ವಾಸ ಹುಟ್ಟಿಸುವ ಪ್ರಯತ್ನ ಮಾಡುವುದು ಅಕ್ಷಮ್ಯ.

ಆದರೆ ಶಾಂತಿಯುತ ನಗರಕ್ಕೆ ರಾಜಕೀಯ ಬಣ್ಣ ಹಚ್ಚುವುದು ಮಾತ್ರ ಒಪ್ಪಲಾಗದು. ನಗರದ ಶಾಂತಿ, ನೆಮ್ಮದಿ ಮತ್ತು ಕೋಮು ಸೌಹಾರ್ದತೆ ಕಾಪಾಡುವುದು ಪ್ರತಿಯೊಬ್ಬರ ಜವಾಬ್ದಾರಿ. ಸಣ್ಣ ಘಟನೆಗಳನ್ನು ದೊಡ್ಡ ವಿವಾದವನ್ನಾಗಿ ಮಾಡಿ ಸಮಾಜದಲ್ಲಿ ಭಿನ್ನಾಭಿಪ್ರಾಯ ಉಂಟುಮಾಡುವ ಬದಲು, ಜನರು ಸಂಯಮದಿಂದ ನಡೆದುಕೊಳ್ಳಬೇಕು ಎಂದು ಅವರು ಮನವಿ ಮಾಡಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗಂಜೀಗೆರೆ ಚಂದ್ರಶೇಖರ್, ಮುಖಂಡರಾದ ಮಂಗ್ಳಾಪುರ ನಾಗರಾಜ್, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಮಾಜಿ ನಿರ್ದೇಶಕ ರಾಮಚಂದ್ರ ಹಾಗೂ ಇತರರಿದ್ದರು.

ಕನ್ನಡ ಪರಿಷತ್ತು ಉಳಿಸುವ ಕೆಲಸವಾಗಲಿ: ಮೇಟಿಕೆರೆ ಹಿರಿಯಣ್ಣ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ಕನ್ನಡ ಸಾಹಿತ್ಯ ಪರಿಷತ್ತು ಕನ್ನಡಿಗರ ಅಸ್ಮಿತೆಯ ಧ್ವನಿಯಾಗಿದ್ದು ಇಂತಹ ಜಾಗಕ್ಕೆ ಕನ್ನಡ ಮನಸುಗಳನ್ನು ಸೆಳೆಯುವ ಸಂಘಟನಾ ಚಾತುರ್ಯ ಇರುವ ಹೋರಾಟದ ಹಿನ್ನೆಲೆಯಿಂದ ಬಂದಂತವರು ಜಿಲ್ಲಾ ಅಧ್ಯಕ್ಷರಾಗಿ ಆಯ್ಕೆಗೊಂಡರೆ ಪರಿಷತ್ ನಿಂತ ನೀರಾಗದೆ ಒಳ್ಳೆಯ ಕೆಲಸ ಮಾಡಲು ಸಾಧ್ಯವಾಗುತ್ತದೆ ಎಂದು ಹಿರಿಯ ಸಾಹಿತಿ ಮೇಟಿಕೇರಿ ಹಿರಿಯಣ್ಣ ಅಭಿಪ್ರಾಯಪಟ್ಟರು.

ಪಟ್ಟಣದ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಆಯೋಜಿಸಿದ್ದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಗಾದಿಗೆ ಆಕಾಂಕ್ಷಿಯಾಗಿರುವ ಸಾಮಾಜಿಕ ಹೋರಾಟಗಾರ ಕಾಳೇನಹಳ್ಳಿ ಆನಂದ್ ಅವರ ಹಿತೈಷಿಗಳ ಚಿಂತನಾ ಸಭೆ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಪ್ರಸ್ತುತ ದಿನಗಳಲ್ಲಿ ಪರಿಷತ್ ಚುನಾವಣೆಗಳು ರಾಜಕೀಯ ಚುನಾವಣೆಗಳ ರೀತಿ ಹಣದ ಹೊಳೆಯನ್ನು ಹರಿಸುವ ಮಟ್ಟಕ್ಕೆ ಬಂದಿರುವುದು ವಿಷಾದಕರ ಸಂಗತಿ. ಕನ್ನಡ ಸಾಹಿತ್ಯ ಪರಿಷತ್ತು ಎಂದರೆ ಕನ್ನಡ ನಾಡು ನುಡಿಗೆ ಸೇವೆ ಸಲ್ಲಿಸುವ ತುಡಿತ ಇರುವ ವ್ಯಕ್ತಿಯನ್ನು ಆರಿಸಿ ಕಳಿಸುವಂತಹ ಒಂದು ವ್ಯವಸ್ಥೆ ಆದರೆ ಇಂದು ಉದ್ಯಮಿಗಳು ರಾಜಕೀಯ ಹಿನ್ನಡೆಯುಳ್ಳವರು. ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುತ್ತಿದ್ದು ಚುನಾವಣೆಗಳಲ್ಲಿ ನಿಜವಾದ ಕನ್ನಡದ ಕಟ್ಟಾಳುಗಳು ಹಿಮ್ಮುಖವಾಗಲು ಕಾರಣವಾಗಿದೆ ಎಂದರು. ಆನಂದ್ ಕಾಳೇನಹಳ್ಳಿ ಚಿಕ್ಕಂದಿನಿಂದಲೂ ಸಂಘಟನಾ ಚತುರತೆ ಇರುವ ವ್ಯಕ್ತಿಯಾಗಿದ್ದು ಅವರಿಗೆ ಕನ್ನಡಕ್ಕಾಗಿ ಕೆಲಸ ಮಾಡುವ ಅವಕಾಶ ಸಿಗಲಿ ಎಂದು ಹಾರೈಸಿದರು.

ನಾಡಪ್ರಭು ಕೆಂಪೇಗೌಡ ವೇದಿಕೆಯ ಸಂಸ್ಥಾಪಕ ರಾಜ್ಯಾಧ್ಯಕ್ಷ ಕಾಳೇನಹಳ್ಳಿ ಆನಂದ್ ಕುಮಾರ್, ಕರ್ನಾಟಕ ಸಹಕಾರ ಮಾರಾಟ ಮಂಡಳಿಯ ನಿರ್ದೇಶಕ ಸಿ.ಎನ್. ಪುಟ್ಟಸ್ವಾಮಿಗೌಡ, ಟಿಎಪಿಸಿಎಂಎಸ್ ಅಧ್ಯಕ್ಷ ಮೆಡಿಕಲ್ ವೆಂಕಟೇಶ್, ಮಾಜಿ ಅಧ್ಯಕ್ಷ ಕುಂಬಾರಹಳ್ಳಿ ರಮೇಶ್, ಮಾಜಿ ಉಪಾಧ್ಯಕ್ಷ ಸಿ.ಜೆ. ಜಗದೀಶ್, ಪುರಸಭಾ ಮಾಜಿ ಅಧ್ಯಕ್ಷ ಸಿ. ನಾಗರಾಜು, ಕೋಟೆ ಮೋಹನ್, ಪ್ರೊ. ಸಿದ್ದೇಗೌಡ, ಹೊನ್ನಶೆಟ್ಟಿಹಳ್ಳಿ ಗಿರಿರಾಜ್, ಜಯಂತಿ ಚಂದ್ರಶೇಖರ್, ಕಾಳೇನಹಳ್ಳಿ ಚಂದ್ರು, ಹರಿಕಥೆ ವಿದ್ವಾಂಸ ಲೋಕೇಶ್ ದಾಸ್, ಮಕ್ಕಳ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷ ಸಿ.ಎನ್. ಅಶೋಕ್ ಇತರರಿದ್ದರು.

ಹಬ್ಬ ಆಚರಣೆಗೂ ಪೊಲೀಸ್ ಬಿಗಿ ಭದ್ರತೆ: ಆತಂಕ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಅರೇಹಳ್ಳಿ: ಶಾಂತಿ, ಸೌಹಾರ್ದತೆ ಪ್ರತೀಕವಾದ ಹಬ್ಬಗಳ ಆಚರಣೆಗೂ ಪೊಲೀಸ್ ಬಿಗಿ ಭದ್ರತೆ ಪಡೆಯುತ್ತಿರುವುದು ಆತಂಕದ ವಿಷಯ ಎಂದು ಜಮಾಅತೆ ಇಸ್ಲಾಮೀ ಹಿಂದ್‌ನ ಹೋಬಳಿ ಕಾರ್ಯದರ್ಶಿ ಮುಜೀಬ್ಬುರ್ ರೆಹಮಾನ್ ಹೇಳಿದರು.

ಬೇಲೂರು ತಾಲ್ಲೂಕು ಅರೇಹಳ್ಳಿಯ ಹಿರಾ ಕೇಂದ್ರದಲ್ಲಿ ರಂಜಾನ್ ಹಬ್ಬದ ಪ್ರಯುಕ್ತ ಜಮಾಅತೆ ಇಸ್ಲಾಮೀ ಹಿಂದ್ ವತಿಯಿಂದ ಆಯೋಜಿಸಿದ್ದ ಈದ್ ಮಿಲನ್ ಸೌಹಾರ್ದ ಕೂಟವನ್ನು ಉದ್ದೇಶಿಸಿ ಮಾತನಾಡಿದ ಅವರು, ಭಾರತದಲ್ಲಿರುವ ಧರ್ಮಗಳು ತನ್ನದೇ ಆದ ಸಂಸ್ಕೃತಿಯನ್ನು ಹೊಂದಿದೆ. ಜಾತಿ ಬೇಧ ಮರೆತು ನಾವೆಲ್ಲಾ ಒಂದಾಗಿ ಎಲ್ಲಾ ಹಬ್ಬಗಳನ್ನು ಸಾಮೂಹಿಕವಾಗಿ ಆಚರಿಸಿದಾಗ ಮಾತ್ರ ಧರ್ಮ ಧರ್ಮಗಳ ಮಧ್ಯೆ ಸಮನ್ವಯತೆ ಉಂಟಾಗುತ್ತದೆ. ಈ ನಿಟ್ಟಿನಲ್ಲಿ ಇಂತಹ ಸೌಹಾರ್ದ ಕೂಟವನ್ನು ಹೆಚ್ಚೆಚ್ಚು ಆಯೋಜಿಸಬೇಕಾದ ಅನಿವಾರ್ಯತೆಯಿದೆ ಎಂದರು.

ಜಮಾಅತೆ ಇಸ್ಲಾಮೀ ಹಿಂದ್‌ನ ರಾಜ್ಯ ಕಾರ್ಯದರ್ಶಿ ಜನಾಬ್ ಅಕ್ಬರ್ ಅಲಿ ಉಡುಪಿ ಅವರು ಮಾತನಾಡಿ, ಪ್ರಕೃತಿಯಲ್ಲಿರುವ ಪ್ರತಿಯೊಂದು ಜೀವ ರಾಶಿ, ವಸ್ತುಗಳು ದೇವರ ಅಣತಿಯಂತೆಯೇ ಕಾರ್ಯ ನಿರ್ವಹಿಸುತ್ತದೆ. ದೇವರ ಅನುಗ್ರಹವನ್ನು ಪಡೆಯಬೇಕಾದರೆ ಬಡವರಿಗೆ ದಾನ ನೀಡಬೇಕಾಗುತ್ತದೆ. ಮನುಷ್ಯರನ್ನು ಮನುಷ್ಯರೊಂದಿಗೆ ಜೋಡಿಸುವುದೇ ಧರ್ಮ. ಇತ್ತೀಚಿನ ದಿನಗಳಲ್ಲಿ ಸಂಬಂಧಗಳ ನಡುವೆ ಬಿರುಕು ಉಂಟಾಗುತ್ತಿದೆ. ಇವನು ನಮ್ಮವನು ಎಂಬುದು ಎಲ್ಲಾ ಧರ್ಮದ ಸಾರವಾಗಿರುವುದರಿಂದ ನಾವೆಲ್ಲಾ ಒಂದೇ ದೇವರ ಮಕ್ಕಳು ಎಂಬ ಅರಿವು ಮೂಡಬೇಕು. ಮನುಷ್ಯನಿಗೆ ಸಾವಿದೆಯೇ ಹೊರತು ಆತ್ಮಕ್ಕೆ ಸಾವಿಲ್ಲ. ಹಾಗಾಗಿ ನಾವು ನಮ್ಮನ್ನು ಅಗಲಿದವರಿಗಾಗಿ ಪ್ರಾರ್ಥನೆ ಸಲ್ಲಿಸಿದರೆ ಅಂತಹ ಆತ್ಮಗಳಿಗೆ ಸ್ವರ್ಗ ಪ್ರಾಪ್ತಿಯಾಗುತ್ತದೆ ಎಂದರು.

ಅಧ್ಯಕ್ಷ ಇಝುರ್ ಅಸರ್ ಉಮ್ರಿ, ವಲಯ ಸಂಚಾಲಕ ಅಬ್ದುಲ್ಲಾ ಉಮ್ರಿ, ಕಾಫಿ ಬೆಳೆಗಾರ ಚಿತ್ರಾಕ್ಷ, ಬಣಕಲ್ ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕ ಶ್ರೀನಿವಾಸ್, ಜಮಾಅತೆ ಎಲ್ಲಾ ಸದಸ್ಯರು ಇತರರಿದ್ದರು.

ಹಾರನಹಳ್ಳಿ ಗ್ರಾ.ಪಂ. ಪಿಠೋಪಕರಕಣ ಜಪ್ತಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಅರಸೀಕೆರೆ: ತಾಲೂಕಿನ ಹಾರನಹಳ್ಳಿ ಗ್ರಾಮ ಪಂಚಾಯಿತಿಗೆ ಸರಬರಾಜು ಮಾಡಲಾದ ಪೀಠೋಪಕರಣಗಳ ಹಣವನ್ನು ಪಾವತಿಸದ ಹಿನ್ನೆಲೆ ನ್ಯಾಯಾಲಯದ ಆದೇಶದಂತೆ ಗ್ರಾಮ ಪಂಚಾಯಿತಿ ಕಚೇರಿಯ ಪೀಠೋಪಕರಣಗಳನ್ನು ಜಪ್ತಿ ಮಾಡಲಾಯಿತು.

ಅರಸೀಕೆರೆ ತಾಲ್ಲೂಕಿನ ಅಕ್ಷಯ ಎಂಟಪ್ರೈಸಸ್ ಸಂಸ್ಥೆಯವರು 2016-17ನೇ ಸಾಲಿನಲ್ಲಿ ಹಾರನಹಳ್ಳಿ ಗ್ರಾಮ ಪಂಚಾಯಿತಿಗೆ ಪೀಠೋಪಕರಣಗಳು ಸೇರಿ ವಿವಿಧ ವಸ್ತುಗಳನ್ನು ಸರಬರಾಜು ಮಾಡಿದ್ದರು. ಆದರೆ, ಅದರ ಬಾಕಿ ಹಣವನ್ನು ಪಂಚಾಯಿತಿ ಇಂದಿಗೂ ಪಾವತಿಸದೆ ಇರುವುದರಿಂದ, ಸಂಸ್ಥೆಯವರು ನ್ಯಾಯಾಲಯದ ಮೊರೆ ಹೋಗಿದ್ದರು.

ವಿಚಾರಣೆ ನಡೆಸಿದ ನ್ಯಾಯಾಲಯವು ಬಡ್ಡಿ ಸೇರಿ ಒಟ್ಟು 16.50 ಲಕ್ಷರೂ. ಪಾವತಿಸುವಂತೆ ಪಂಚಾಯಿತಿಗೆ ಆದೇಶ ನೀಡಿತ್ತು. ಈ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಲು ಮೂರು ತಿಂಗಳ ಕಾಲಾವಕಾಶ ನೀಡಲಾಗಿದ್ದರೂ, ಈ ಕುರಿತು ಪಂಚಾಯಿತಿಯಿಂದ ಯಾವುದೇ ಹಣ ಸಿಲ್ಲಿಸಲಿಲ್ಲ. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗೂ ಈ ಕುರಿತು ಸ್ಪಷ್ಟ ದಾಖಲೆಗಳ ಕೊರತೆ ಕಂಡುಬಂದಿದ್ದು, ಸರಬರಾಜಾದ ವಸ್ತುಗಳ ವಿವರಗಳು ಮತ್ತು ಬಿಲ್ ದಾಖಲೆಗಳು ಕಡತಗಳಲ್ಲಿ ಲಭ್ಯವಿಲ್ಲ ಎಂದು ತಿಳಿಸಿದ್ದರು. ಆದ್ದರಿಂದ ನ್ಯಾಯಾಲಯದ ಆದೇಶದಂತೆ ಬಾಕಿ ಹಣ ಪಾವತಿಸದ ಹಿನ್ನೆಲೆ ಪಂಚಾಯಿತಿಯ ಕಂಪ್ಯೂಟರ್ ಸೇರಿ ಪೀಠೋಪಕರಣಗಳನ್ನು ಜಪ್ತಿ ಮಾಡಿ ವಶಕ್ಕೆ ಪಡೆಯಲಾಯಿತು.

ಅಕ್ಷಯ ಎಂಟಪ್ರೈಸಸ್ ಮಾಲೀಕ ಸಿದ್ದರಾಜು ಮಾತನಾಡಿ, ಅಂದಿನ ಪಂಚಾಯಿತಿ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳಿಂದ ಇಂಡೆಂಟ್ ಪಡೆದು ವಸ್ತುಗಳನ್ನು ಸರಬರಾಜು ಮಾಡಿದ್ದೇವೆ. ನಂತರ ಪಂಚಾಯಿತಿ ಆಡಳಿತ ಬದಲಾಗಿದ್ದು, ಬಿಲ್ ಸಲ್ಲಿಸಲು ಬಂದಾಗ ಅಧಿಕಾರಿಗಳು ನಿರ್ಲಕ್ಷ್ಯ ವಹಿಸಿದರು. ಆದ್ದರಿಂದ ನ್ಯಾಯಾಲಯದಲ್ಲಿ ದಾವೆ ಹೂಡಬೇಕಾಯಿತು ಎಂದು ತಿಳಿಸಿದ್ದಾರೆ. ಈ ಕುರಿತು ಪಂಚಾಯಿತಿ ಆಡಳಿತಾಧಿಕಾರಿ ಹೇಮಂತ್ ಪ್ರತಿಕ್ರಿಯಿಸಿ, ಪ್ರಕರಣವನ್ನು ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳುವುದಾಗಿ ಹೇಳಿದ್ದಾರೆ.

ಲಕ್ಷ್ಮೀ, ಬಿಂದುಶ್ರೀ ಚ.ರಾ. ಪಟ್ಟಣ ತಾಲ್ಲೂಕಿಗೆ ಪ್ರಥಮ

ಚನ್ನರಾಯಪಟ್ಟಣ: ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಪಟ್ಟಣದ ಕ್ರೈಸ್ಟ್ ಕಾಲೇಜಿನ ವಿಜ್ಞಾನ ವಿಭಾಗದ ಎಸ್.ಎಸ್.ಲಕ್ಷ್ಮಿ 595 ಮತ್ತು ವಾಣಿಜ್ಯ ವಿಭಾಗದಲ್ಲಿ ಫೋಕಸ್ ಕಾಲೇಜಿನ ಎಂ.ಬಿಂದುಶ್ರೀ 589 ಅಂಕಗಳೊಂದಿಗೆ ತಾಲ್ಲೂಕಿಗೆ ಪ್ರಥಮ ಸ್ಥಾನ ಪಡೆದಿದ್ದಾರೆ.

ಪಟ್ಟಣದ ಕೋಟೆ ಬಡಾವಣೆಯಲ್ಲಿರುವ ಕ್ರೈಸ್ಟ್ ದಿ ಕಿಂಗ್ ಪಿಯು ಕಾಲೇಜಿನ ವಿಜ್ಞಾನ ವಿಭಾಗದ ಎಸ್.ಎಸ್.ಲಕ್ಷ್ಮಿ 600 ಅಂಕಗಳಿಗೆ 596 (ಶೇ.99.16) ಮತ್ತು ಡಿ.ಕಾಳೇನಹಳ್ಳಿ ರಸ್ತೆಯಲ್ಲಿರುವ ಫೋಕಸ್ ಪಿಯು ಕಾಲೇಜಿನ ವಾಣಿಜ್ಯ ವಿಭಾಗದ ವಿದ್ಯಾರ್ಥಿನಿ ಎಂ.ಬಿಂದುಶ್ರೀ 600 ಅಂಕಗಳಿಗೆ 589 (ಶೇ.98.16) ಅಂಕಗಳಿಸಿ ಸಾಧನೆ ಮಾಡಿದ್ದಾರೆ. ಕಾಲೇಜಿಗೆ ಕೀರ್ತಿ ತಂದ ವಿದ್ಯಾರ್ಥಿಗಳನ್ನು ಕ್ರೈಸ್ಟ್ ದಿ ಕಿಂಗ್ ಕಾಲೇಜಿನ ಅಂತೋನಿ ರಾಜ್ ಮತ್ತು ಫೋಕಸ್ ಕಾಲೇಜಿನ ಪ್ರಾಂಶುಪಾಲ ಎ.ಆರ್.ಜೀವನ್, ಸಂಸ್ಥೆಯ ಅಧ್ಯಕ್ಷ ಸಿ.ಎಸ್.ಶ್ರೀಹರ್ಷ, ಉಪಾಧ್ಯಕ್ಷ ಬಿ.ಪಿ.ಮೋಹನ್ ಅಭಿನಂದಿಸಿದ್ದಾರೆ.

ಮಹಿಳಾ ಪಾತ್ರಧಾರಿಗಳ ದರಶಥ ಶ್ರೀರಾಮ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಇತ್ತೀಚಿಗೆ ಹಾಸನದ ಶ್ರೀ ಸೀತಾರಾಮಾಂಜನೇಯ ದೇವಸ್ಥಾನದಲ್ಲಿ ರಾಮನವಮಿ ಪ್ರಯುಕ್ತ ಶ್ರೀಮತಿ ಮಂಗಳ ವೆಂಕಟೇಶ್ ಸ್ಮರಣಾರ್ಥ ಶ್ರೀಮತಿ ಶ್ವೇತಾ ಮೋಹನ್ ನಿರ್ದೇಶನದಲ್ಲಿ ಶ್ರೀ ವಿಜಯ ವಿರಚಿತ ದಶರಥ ಶ್ರೀರಾಮ ಎಂಬ ನಾಟಕವನ್ನು ಶ್ರೀ ಶಾರದಾ ಕಲಾ ಸಂಘದ ವನಿತೆಯರು ಪ್ರಸ್ತುತಪಡಿಸಿದರು.

ಇದು ಸುಮಾರು ಒಂದುವರೆ ಗಂಟೆಯ ಪೌರಾಣಿಕ ನಾಟಕವಾಗಿದ್ದು ದಶರಥನನ್ನು ನಾಟಕದ ಕೇಂದ್ರ ಬಿಂದುವಾಗಿಸಿಕೊಂಡು ನಾಟಕ ರಚಿತಗೊಂಡಿದೆ. ತನ್ನ ಮಗ ಶ್ರೀರಾಮನಿಲ್ಲದೆ ಬದುಕಲು ಸಾಧ್ಯವಿಲ್ಲವೆಂದು ದಶರಥನು ಪ್ರಾಣ ಬಿಡುವ ಪ್ರಸಂಗವೇ ಈ ನಾಟಕದ ಕಥಾವಸ್ತು. ಮಕ್ಕಳಿಲ್ಲದ ದಶರಥನು ವಸಿಷ್ಟರ ಮಾರ್ಗದರ್ಶನದಂತೆ ಪುತ್ರಕಾಮೇಷ್ಠಿ ಯಾಗವನ್ನು ಮಾಡಿ ಕೌಸಲ್ಯಗೆ ಶ್ರೀರಾಮನು, ಕೈಕೆಗೆ ಭರತನು, ಸುಮಿತ್ರಗೆ ಲಕ್ಷ್ಮಣ ಶತ್ರುಘ್ನರು ಜನಿಸಿದರು. ನಾಲ್ಕು ಮಕ್ಕಳು ಬೆಳೆದು ದೊಡ್ಡವರಾಗುತ್ತಾರೆ. ಈ ಮಧ್ಯೆ ಬ್ರಹ್ಮರ್ಷಿ ವಿಶ್ವಮಿತ್ರರು ತಾವು ನಡೆಸುತ್ತಿದ್ದ ಯಾಗದ ರಕ್ಷಣೆಗೆ ರಾಮ ಲಕ್ಷ್ಮಣರನ್ನು ಜೊತೆಗೆ ಕಳುಹಿಸುವಂತೆ ದಶರಥನನ್ನು ಕೇಳುತ್ತಾರೆ. ಒಲ್ಲದ ಮನಸ್ಸಿನಿಂದ ಅವರೊಡನೆ ದಶರಥ ಕಳಿಸುತ್ತಾನೆ.

ಮಾರೀಚ ಮತ್ತು ಬಾಹುವನ್ನು ರಾಮ ಲಕ್ಷ್ಮಣರು ಸಂಹರಿಸಿ ವಿಶ್ವಾಮಿತ್ರ ಮಿಥಿಲೆಯ ಜನಕ ಮಹಾರಾಜನ ಆಸ್ಥಾನದಲ್ಲಿ ಆತಿಥ್ಯ ಸ್ವೀಕರಿಸಲು ಹೋದಾಗ ಸೀತೆಯ ಸ್ವಯಂವರ ಏರ್ಪಟ್ಟಿರುತ್ತದೆ. ರಾಮನು ಶಿವಧನಸ್ಸನ್ನು ಲೀಲಾಜಾಲವಾಗಿ ಮುರಿದು ಸೀತೆಯನ್ನು ಗೆದ್ದು ಅವರಿರ್ವರ ಹಾಗೂ ಉಳಿದ ಸಹೋದರರ ಕಲ್ಯಾಣೋತ್ಸವ ಜರುಗುತ್ತದೆ. ದಶರಥನು ರಾಮನಿಗೆ ಯುವ ಪಟ್ಟಾಭಿಷೇಕ ಮಾಡಲು ಹೊರಡುತ್ತಾನೆ. ಮಂಥರೆಯ ಕುತಂತ್ರದಿಂದ ಕೈಕೆಯ ಮನ ಕೆಡುತ್ತದೆ.

ಇದರ ಪರಿಣಾಮವಾಗಿ ರಾಮನು ನಾರುಮುಡಿಯನ್ನುಟ್ಟು 14 ವರ್ಷ ವನವಾಸಕ್ಕೆ ಹೋಗಬೇಕಾಗುತ್ತದೆ. ಇದೇ ಕಾರಣಕ್ಕೆ ದಶರಥನು ಮನನೊಂದು ಪ್ರಾಣ ಬಿಡುವ ದೃಶ್ಯದೊಂದಿಗೆ ನಾಟಕ ಮುಕ್ತಾಯವಾಗುತ್ತದೆ.

ನಾಟಕದ ಕೇಂದ್ರ ಪಾತ್ರ ದಶರಥನ ಪಾತ್ರವನ್ನು ಶ್ವೇತಾ ಮೋಹನ್ ಸಮರ್ಥವಾಗಿ ಹಾಗೂ ಲೀಲಾಜಾಲವಾಗಿ ಅಭಿನಯಿಸಿ ತಮ್ಮ 15 ವರ್ಷಗಳ ರಂಗಾಭಿನಯ ಅನುಭವ ತೋರಿದರು. ಮಂಥರೆ ಪಾತ್ರದಲ್ಲಿ ಶ್ರೀಮತಿ ಲಲಿತಾ ರಘು ಎಲ್ಲರ ಮನಸೂರೆಗೊಂಡರು. ವಸಿಷ್ಠರಾಗಿ ಪ್ರಭಾಮಣಿ ಮಂಜುನಾಥ್ ಪಾತ್ರಕ್ಕೆ ನ್ಯಾಯ ಒದಗಿಸಿದರು. ತಿಮ್ಮಿಯ ಪಾತ್ರದಲ್ಲಿ ಸಂಗೀತ ಶ್ರೀನಿವಾಸ್ ಸಭಿಕರನ್ನು ನಗಿಸಿದರು. ಕೌಸಲ್ಯೆ ಪಾತ್ರದಲ್ಲಿ ಶ್ರೀಮತಿ ತೀರ್ಥ ಅವರು, ಸುಮಿತ್ರ ಪಾತ್ರದಲ್ಲಿ ಕನಕ ಮೇಡಂ ಕೈಕೇಯಿ ಪಾತ್ರದಲ್ಲಿ ಜಯ ರಮೇಶ್ ಅದ್ಭುತ ನಟನೆ ತೋರಿದರು. ವಿಶ್ವಾಮಿತ್ರನ ಪಾತ್ರದಲ್ಲಿ ಆಶಾ ಗಿರೀಶ್ ಭಟ್ ರಾಮನ ಪಾತ್ರದಲ್ಲಿ ರಾಜರಾಜೇಶ್ವರಿ, ಸೀತಾ ಪಾತ್ರದಲ್ಲಿ ಪೂಜಾ ಅವರು ಲಕ್ಷ್ಮಣನ ಪಾತ್ರದಲ್ಲಿ ಮಾಲಾ, ಸೂತ್ರಧಾರಿಯಾಗಿ ಹೇಮಾರಾಣಿ, ಸೇವಕಿಯಾಗಿ ಅನ್ನಪೂರ್ಣ, ತಿಮ್ಮನ ಪಾತ್ರದಲ್ಲಿ ಪುಷ್ಪ, ಸುಮಂತನ ಪಾತ್ರದಲ್ಲಿ ಶಾಂತಕುಮಾರಿ, ಬಾಲರಾಮನಾಗಿ ಧಾತ್ರಿ ಪ್ರಹರಿ ಅಭಿನಯಿಸಿದರು.

ನೃತ್ಯದಲ್ಲಿ ಧೃತಿ ಮತ್ತು ವಿಸ್ಮಿತ ನಾಟಕಕ್ಕೆ ಪೂರಕವಾಗಿದ್ದು ಕಳೆ ತಂದರು. ಹಾಡುಗಾರಿಕೆಯಲ್ಲಿ ಸವಿತಾ ಸುದರ್ಶನ್ ,ರೂಪ ಸುರೇಶ್, ಅಶ್ವಿನಿ ರಂಗನಾಥ್ ಸುಮಾ ಸತೀಶ್ ಮತ್ತು ತಬಲ ಸಹಕಾರ ನಾಗೇಶ್ ಅವರದು ಮತ್ತು ನೇಪಥ್ಯ ಸಹಕಾರದಲ್ಲಿ ರಾಣಿಮೂರ್ತಿ ಶಾಂತ ರಮೇಶ್ ಇದ್ದರು. ಸಂಗೀತ ಜೈ ಶಂಕರ್ ಬೆಳಗುಂಬ ಅವರದು. ಮೇಕಪ್ ಹನುಮಂತು ಅವರ ವಸ್ತ್ರಾಲಂಕಾರ ಶೋಭೆ ತಂದಿತ್ತು. ತಮ್ಮ ಪ್ರಥಮ ನಿರ್ದೇಶನದಲ್ಲೇ ಉತ್ತಮ ಪ್ರಯೋಗದಿಂದ ಶ್ವೇತಾ ಮೋಹನ್ ಗಮನ ಸೆಳೆದರು.

ಕೊಲ್ಲಾಪುರದಮ್ಮ ಜಾತ್ರಾ ಮಹೋತ್ಸವ ಸಂಪನ್ನ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಗಂಡಸಿ: ಹೋಬಳಿಯ ಈಡಿಗರಹಟ್ಟಿ ಕ್ರಾಸ್ ಗ್ರಾಮದ ಶ್ರೀ ಕೊಲ್ಲಾಪುರದಮ್ಮ ದೇವಿ ಜಾತ್ರಾ ಮಹೋತ್ಸವ ಮೂರು ದಿನಗಳ ಕಾಲ ವಿಜೃಂಭಣೆಯಿಂದ ನೆರವೇರಿತು.

ಸೋಮವಾರ ಸಂಜೆ ಶ್ರೀ ಕೊಲ್ಲಾಪುರದಮ್ಮ ದೇವಿಯವರಿಗೆ ಗ್ರಾಮದ ಸುಮಂಗಲೆಯರಿಂದ ಮದುವಣಗಿತ್ತಿ ಶಾಸ್ತ್ರ, ಕನ್ನಡಿ ಶಾಸ್ತ್ರ, ಆರತಿ ಬಾನ ಕಾರ್ಯಕ್ರಮಗಳೊಂದಿಗೆ ಜಾತ್ರಾ ಮಹೋತ್ಸವಕ್ಕೆ ಚಾಲನೆ ನೀಡಲಾಯಿತು.

ಮಂಗಳವಾರ ರಾತ್ರಿ, ಗ್ರಾಮದ ಮಹಿಳೆಯರು, ಯುವತಿಯರು ಶ್ರೀ ದೇವಿಯವರಲ್ಲಿ ತಾವು ಮಾಡಿಕೊಂಡ ಹರಕೆ ತೀರಿಸಲು ಬಾಯಿ ಬೀಗ, ತಂಬಿಟ್ಟಿನ ಆರತಿ ಹೊತ್ತು ಶ್ರೀದೇವಿಯವರ ಗಂಗಾ ಸ್ನಾನದ ಮೆರವಣಿಗೆಯಲ್ಲಿ ಹೆಜ್ಜೆ ಹಾಕಿದರು. ನಂತರ ಬಣ್ಣ ಬಣ್ಣದ ಹೂವುಗಳಿಂದ ಅಲಂಕೃತಗೊಂಡ ದರ್ಬಾರ್ ಮಂಟಪದ ಮೇಲೆ ಶ್ರೀದೇವಿ ಅವರನ್ನು ಕೂರಿಸಿ ವಿವಿಧ ಕಲಾ ತಂಡಗಳ ಕುಣಿತ, ಭಾರೀ ಮದ್ದು ಗುಂಡಿನ ಸುರಿಮಳೆಯೊಂದಿಗೆ ಗ್ರಾಮದ ಪ್ರಮುಖ ಬೀದಿಗಳ ಮೆರವಣಿಗೆಯೊಂದಿಗೆ ಜಾತ್ರಾ ಮೈದಾನಕ್ಕೆ ಕರೆತರಲಾಯಿತು.

ಬುಧವಾರ ಮಧ್ಯಾಹ್ನ ಶ್ರೀ ಕೊಲ್ಲಾಪುರದಮ್ಮ ದೇವಿಯವರ ಜಾತ್ರಾ ಮೈದಾನದಲ್ಲಿ ಭಕ್ತಾದಿಗಳಿಗೆ ಅನ್ನ ದಾಸೋಹ ಕಾರ್ಯಕ್ರಮದ ನಂತರ ರಾತ್ರಿ ಸುತ್ತಲಿನ ಹಳ್ಳಿಗಳ ಸಾವಿರಾರು ಭಕ್ತಾದಿಗಳ ಸಮ್ಮುಖದಲ್ಲಿ ಸಿಡಿ, ಉಯ್ಯಾಲೆ ಉತ್ಸವದ ನಂತರ ಕಾರ್ಯಕ್ರಮ ಸಂಪನ್ನಗೊಂಡಿತು.

ಇತಿಹಾಸದಲ್ಲಿ ಈ ದಿನ

ಏಪ್ರಿಲ್-11

1909: ಇಸ್ರೇಲ್ ದೇಶದ ಪ್ರಮುಖ ನಗರವಾದ ಟೆಲ್ ಅವೀವ್ ಸ್ಥಾಪನೆಯಾಯಿತು.

1919: ಮಹಾತ್ಮಾ ಗಾಂಧೀಜಿ ಅವರ ನೇತೃತ್ವದಲ್ಲಿ ಬ್ರಿಟಿಷರ ವಿರುದ್ಧದ ಸತ್ಯಾಗ್ರಹ ಚಳವಳಿ ತೀವ್ರಗೊಂಡ ಕಾಲ.

1968: ಅಮೆರಿಕಾದಲ್ಲಿ ಇಜಿಡಜ್ಕ್ಷ್ಕಿಜಿಜಜರಿಠ ಅ್ಚಠಿ ಟ್ಟ 1968 ಅಂಗೀಕರಿಸಲಾಯಿತು, ಇದು ನಾಗರಿಕ ಹಕ್ಕುಗಳನ್ನು ಬಲಪಡಿಸಿತು.

1970: ವಿಶ್ವದ ಮೊದಲ ಅಟಟ್ಟ್ಟುಟ 13 ಮಿಷನ್ ಚಂದ್ರನತ್ತ ಪ್ರಯಾಣ ಆರಂಭಿಸಿತು.

2011: ಭಾರತದ ಹಿರಿಯ ಕ್ರಿಕೆಟಿಗ ಸಚಿನ್ ತೆಂಡೂಲ್ಕರ್ ಅವರಿಗೆ ರಾಜ್ಯಸಭಾ ಸದಸ್ಯತ್ವ ನೀಡಲಾಯಿತು.

ಜನನ

1908: ಮಸಾರು ಇಬುಕಾ, ಸೋನಿ ಸಂಸ್ಥೆಯ ಸಹ ಸ್ಥಾಪಕ

1920: ಸತ್ಯಜಿತ್ ರೇ, ಖ್ಯಾತ ಚಲನಚಿತ್ರ ನಿರ್ದೇಶಕ

1942: ಜಾರ್ಜ್ ಲೂಕಾಸ್, ಸ್ಟಾರ್ ವಾರ್ಸ್ ಚಿತ್ರಗಳ ಸೃಷ್ಟಿಕರ್ತ

ಮರಣ

1968: ಮಾರ್ಟಿನ್ ಲೂಥರ್ ಕಿಂಗ್ ಜೂನಿಯರ್ ಅವರ ಅಂತ್ಯಕ್ರಿಯೆ ನಡೆದ ದಿನ

1977: ಜಾಕ್ ಪ್ರೇವೇರ್, ಪ್ರಸಿದ್ಧ ಕವಿ

ಪೌರ ಕಾರ್ಮಿಕರು, ಪಾಲಿಕೆ ಸಿಬ್ಬಂದಿಗೆ ಆರೋಗ್ಯ ತಪಾಸಣೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ವಿಶ್ವ ಆರೋಗ್ಯ ದಿನಾಚರಣೆ ಅಂಗವಾಗಿ ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಮಹಾನಗರ ಪಾಲಿಕೆ ವತಿಯಿಂದ ಪಾಲಿಕೆ ಸಿಬ್ಬಂದಿ ಹಾಗೂ ಪೌರ ಕಾರ್ಮಿಕರಿಗಾಗಿ ಆರೋಗ್ಯ ತಪಾಸಣಾ ಉಚಿತ ಶಿಬಿರ ನಡೆಸಲಾಯಿತು. ಶಿಬಿರದಲ್ಲಿ 156ಕ್ಕೂ ಹೆಚ್ಚು ಜನರು ಭಾಗವಹಿಸಿ ಸದುಪಯೋಗ ಪಡೆದುಕೊಂಡರು.

ಶಿಬಿರದಲ್ಲಿ ವಿವಿಧ ವೈದ್ಯಕೀಯ ಸಂಸ್ಥೆಗಳ ಸಹಯೋಗದಲ್ಲಿ ಹಲವು ತಪಾಸಣೆಗಳನ್ನು ನಡೆಸಲಾಯಿತು. ವಿ ಕೇರ್ ಆಸ್ಪತ್ರೆ ವತಿಯಿಂದ ದಂತ ತಪಾಸಣೆ, ಸುನಂದ ಸೂಪರ್ ಸ್ಪೆಷಾಲಿಟಿ ಕಣ್ಣಿನ ಆಸ್ಪತ್ರೆ ವತಿಯಿಂದ ನೇತ್ರ ತಪಾಸಣೆ, ಹಾಸನ ರಕ್ತನಿಧಿ ಕೇಂದ್ರದಿಂದ ರಕ್ತ ಗುಂಪು ಪರೀಕ್ಷೆ ಹಾಗೂ ಹಿಮೋಗ್ಲೋಬಿನ್ ತಪಾಸಣೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಎನ್‌ಸಿಡಿ ತಂಡದಿಂದ ಬಿಪಿ ಮತ್ತು ಶುಗರ್ ತಪಾಸಣೆ, ಡಾ. ಚಂದನ್ ಅವರಿಂದ ಸಾಮಾನ್ಯ ಕಾಯಿಲೆಗಳ ತಪಾಸಣೆ ನಡೆಯಿತು.

ಮಹಾನಗರ ಪಾಲಿಕೆ ಆಯುಕ್ತ ಕೃಷ್ಣಮೂರ್ತಿ ಅವರು ಮಾತನಾಡಿ, ಸಿಬ್ಬಂದಿ ದಿನನಿತ್ಯದ ಕೆಲಸದ ಒತ್ತಡ ಮತ್ತು ಅನಿಯಮಿತ ಜೀವನಶೈಲಿಯಿಂದ ತಮ್ಮ ಆರೋಗ್ಯದ ಕಡೆ ಸಾಕಷ್ಟು ಗಮನ ಹರಿಸಲು ಸಾಧ್ಯವಾಗುತ್ತಿಲ್ಲ. ಇಂತಹ ಶಿಬಿರಗಳು ಅವರ ಆರೋಗ್ಯ ಸ್ಥಿತಿಯನ್ನು ಅರಿಯಲು ಹಾಗು ತಕ್ಷಣ ಚಿಕಿತ್ಸೆ ಪಡೆಯಲು ಉತ್ತಮ ಅವಕಾಶ ಒದಗಿಸುತ್ತವೆ ಎಂದು ತಿಳಿಸಿದರು.

ರೆಡ್ ಕ್ರಾಸ್ ಸಂಸ್ಥೆ ಉಪಸಭಾಪತಿ ಡಾ.ವೈ.ಎಸ್. ವೀರಭದ್ರಪ್ಪ ಮಾತನಾಡಿ, ಪ್ರತಿಯೊಬ್ಬರೂ ತಮ್ಮ ವೈಯಕ್ತಿಕ ಆರೋಗ್ಯದ ಜೊತೆಗೆ ಕುಟುಂಬದ ಆರೋಗ್ಯದ ಮೇಲೂ ಸಮಾನ ಕಾಳಜಿ ವಹಿಸಬೇಕು. ಸಣ್ಣ ಸಮಸ್ಯೆಗಳನ್ನೂ ನಿರ್ಲಕ್ಷಿಸದೆ ಸಮಯಕ್ಕೆ ತಕ್ಕಂತೆ ತಪಾಸಣೆ ಮಾಡಿಸಿಕೊಂಡರೆ ದೊಡ್ಡ ಕಾಯಿಲೆಗಳನ್ನು ತಡೆಯಬಹುದು. ರೆಡ್ ಕ್ರಾಸ್ ಸಂಸ್ಥೆ ಸದಾ ಜನಸೇವೆಗೆ ಬದ್ಧವಾಗಿದೆ ಎಂದು ಹೇಳಿದರು.

ರೆಡ್ ಕ್ರಾಸ್ ಸಂಸ್ಥೆ ಸಭಾಪತಿ ಹೆಮ್ಮಿಗೆ ಮೋಹನ್, ಉದಯ್ ಕುಮಾರ್, ಪಾಲಿಕೆ ಇಂಜಿನಿಯರ್ ಸತ್ಯನಾರಾಯಣ್, ಜಯೇಂದ್ರಕುಮಾರ್, ಅಮ್ಜದ್ ಖಾನ್, ಜಯಪ್ರಕಾಶ್, ಡಾ.ರಂಗಲಕ್ಷ್ಮಿ, ಭೀಮರಾಜ್, ಕೆ.ಟಿ.ಜಯಶ್ರೀ ಮತ್ತಿತರರು ಹಾಜರಿದ್ದರು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248